ದಿನಾಂಕ 05-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಎದುರುದಾರರ ಪರವಾಗಿ ಶ್ರೀ ಎಸ್ ಎ ವಕೀಲರವರಿಂದಃ**

ಪ್ರಕರಣಕ್ಕೆ ಸಂಬಂದಿಸಿದಂತೆ 1 ನೇ ಎದುರುದಾರರು ತಕರಾರನ್ನು ಸಲ್ಲಿಸಿದ್ದು ಅದನ್ನು ಓದಿಸಿ ಅರ್ಥ ಮಾಡಿಕೊಂಡಿರುತ್ತೀರಾ ಎಂದರೆ ಹೌದು. ನಿಮ್ಮ ಗಂಡನವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ತೋರಿಸಲು ಮರಣ ಸಮರ್ಥನಾ ಪತ್ರವನ್ನು ನೀಡಿರುತ್ತೀರಾ ಎಂದರೆ ಇಲ್ಲ. ಈ ಅರ್ಜಿಯಲ್ಲಿ ಸೌಮ್ಯ ಎಂ. ರವರನ್ನು ನಿಮ್ಮ ಮಗಳು ಎಂದು ಕಾಣಿಸಿರುತ್ತೀರಿ ಎಂದರೆ ಹೌದು. ನಿಮ್ಮ ಮಗಳು ಧರ್ಮವನ್ನು ಬದಲಾವಣೆ ಮಾಡಿಕೊಂಡಿದ್ದಾರೆಯೇ ಎಂದರೆ ಹೌದು. ನಿಮ್ಮ ಮಗಳು ಧರ್ಮ ಬದಲಾವಣೆ ಮಾಡಿಕೊಳ್ಳುವ ಪೂರ್ವದಲ್ಲಿ ಅವರ ಹೆಸರು ಏನು ಎಂದರೆ ಆಸ್ಮಾ. ನಿಮ್ಮ ಮಗಳು ಹಿಂದೂ ಧರ್ಮದ ಸಂಪ್ರದಾಯವನ್ನು ಪಾಲನೆ ಮಾಡುತ್ತಿದ್ದಾರೆಂದು ತೋರಿಸಲು ದಾಖಲೆ ಇದೆಯೇ ಎಂದರೆ ಇಲ್ಲ.

2 ನೇ ಅರ್ಜಿದಾರರಿಗೂ ನಿಮಗೂ ಯಾವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಇರುತ್ತದೆ. 2 ನೇ ಅರ್ಜಿದಾರರು ಅವರ ಗಂಡನೊಂದಿಗೆ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಹೌದು. ನಿಮ್ಮ ಮಗನು ಸಾಯುವ ಮೊದಲಿನಿಂದಲೂ 2 ನೇ ಅರ್ಜಿದಾರರು ಅವರ ಗಂಡನೊಂದಿಗೆ ವಾಸವಾಗಿರುತ್ತಾರೆ ಎಂದರೆ ಹೌದು. ನಿಮ್ಮ ಮಗನು ಎಷ್ಟು ಸಾಯುವ ಮೊದಲು ಎಷ್ಟು ಸಮಯದಿಂದ ಅಮಲು ಬರುವ ಪದಾರ್ಥಗಳನ್ನು ತೆಗೆದುಕೊಳ್ಳುತ್ತಿದ್ದರು ಎಂದರೆ ನಾನು ನೋಡಿರುವುದಿಲ್ಲ. ನಿಮ್ಮ ಮಗನಿಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಡಿ.ಎಲ್ ಇತ್ತೇ ಎಂದರೆ ಇಲ್ಲ. ಅಪಘಾತವನ್ನು ನೀವು ನೋಡಿರುವುದಿಲ್ಲ ಎಂದರೆ ಹೌದು.

ಪಂಚನಾಮೆಯನ್ನು ಓದಿಸಿ ಅರ್ಥಮಾಡಿಕೊಂಡಿರುತ್ತೀರಾ ಎಂದರೆ ಹೌದು. ನಿಪಿ 3 ರಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತದೆ ಎಂದರೆ ಹೌದು. ಅಪಘಾತವು ಬುಲೆರೋ ವಾಹನದ ಚಾಲಕರ ತಪ್ಪಿನಿಂದ ಆಗಿರುವುದಿಲ್ಲ ನಿಮ್ಮ ಮಗನ ತಪ್ಪಿನಿಂದಲೇ ಆಗಿರುತ್ತದೆ ಆದ್ದರಿಂದ 1 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಂ.ಎ.ಸಿ.ಟಿ. ಉಡುಪಿ.